ಕೇಶವ ಎನ್. ಪೈ, ಕಾಸರಗೋಡ

ಗಂಡನ ಕೈಗೆ ಸ್ಟಿಕ್ ಬಂದರೂ, ಹೆಂಡತಿಯ ಕೈಯಲ್ಲಿ ಲಿಪ್‌ಸ್ಟಿಕ್ ಏಕೆ?



ಅದೇ ಸರಿ; ತುಟಿಗೆ ಕೋಲು, ನಡೆಯಲು ಆಧಾರಕ್ಕೆ ಲಿಪ್‌ಸ್ಟಿಕ್ ಏನೇನೂ ಸರಿಯಲ್ಲ ಬಿಡಿ!

ಪಿ.ವಿಜಯ, ಸವದತ್ತಿ

ಓದುವ ಹವ್ಯಾಸ ಹೇಗೆ ಬೆಳೆಸಿಕೊಳ್ಳುವುದು?

ಕರೆಂಟಿಲ್ಲದ ಮನೆ, ಮೊಬೈಲಿಲ್ಲದ ಕೈ ಇರಲ್ ಪುಸ್ತಕಕ್ಕೆ ಕಣ್ಣು ಹಚ್ಚೆಂದ ಡಿಂಕಣ್ಣ!

ಮಹಾವೀರ ಕಾಸಾರ, ಚನ್ನಗಿರಿ

ವರದಿಗಾರರಲ್ಲದವರೂ ತಮ್ಮ ವಾಹನಗಳ ಮೇಲೆ ಪ್ರೆಸ್ ಎಂದು ಬರೆಸಿರುವುದೇಕೆ?

ಸೊಳ್ಳೆ ಹೊಡೆಯಕ್ಕೂ ತಾಕತ್ತಿಲ್ದವ್ರು ಕೊಳ್ಳೆ ಹೊಡೆಯಕ್ ದಾರಿ ಆಗುತ್ತೇಂತ!

ಕೃ.ನಾಗೇಶ, ಅರಸೀಕೆರೆ

ಹಂಸಕ್ಷೀರ ನ್ಯಾಯ, ಹಂಸಗೀತೆಯಂಥ ಅವಾಸ್ತವಿಕತೆಯನ್ನು ಕವಿಗಳು ವೈಭವೀಕರಿಸುವುದು ಏತಕ್ಕೆ?



ಡೈರಿ ಕ್ಷೀರ ಅನ್ಯಾಯ, ಹಿಂಸೆಗೀತೆಗಳ ಕವಿತೆ ಬರೆದರೆ ಮಂಕು ಕವಿಯುವುದರಿಂದ!

ಕೆ.ಎನ್. ನಾರಾಯಣರೆಡ್ಡಿ, ಕೆ.ಜಿ.ಎಫ್.

ಒಂದು ಮನೆಯ ಅತ್ತೆಗೆ ಇನ್ನೊಂದು ಮನೆಯ ಸೊಸೆ ಪ್ರಿಯವಾಗುತ್ತಾಳಲ್ಲಾ, ಕಾರಣವೇನು?

ಆ ಮಗ ಈ ಅತ್ತೆಯ ಮಗನಲ್ಲವಲ್ಲ! ಮಗನ ಪ್ರೀತಿಯ ಓನರ್‌ಷಿಪ್ ಹಕ್ಕುಗಳಿಗಾಗಿಯೇ ಜಗದ ಎಲ್ಲಾ ಅತ್ತೆ–ಸೊಸೆಯರ ಜಗಳ.

ಎಂ.ಎಸ್. ಧರ್ಮೇಂದ್ರ, ಜಿ.ಟಿ.ಆರ್.ಇ. ಕ್ಯಾಂಪಸ್

ಎಲ್ಲಾ ಪದವಿಗಳಿಗೂ ರಾಜೀನಾಮೆ ಕೊಡುವ ರೀತಿ ಗಂಡನ ಪದವಿಗೆ ರಾಜೀನಾಮೆ ಕೊಡಬಹುದಾ?

ಕೊಡಬಹುದು, ಆದರೆ ಪತ್ನಿಯೆಂಬ ಹೈಕಮಾಂಡ್ ಸ್ವೀಕರಿಸಬೇಕಲ್ಲಾ...!

ರವೀಂದ್ರನಾಥ ಶಿ, ಯಡಹಳ್ಳಿ, ಬೀಳಗಿ

ಪ್ರೇಮಾಯಣಕ್ಕೂ, ರಾಮಾಯಣಕ್ಕೂ ಇರುವ ವ್ಯತ್ಯಾಸವೇನು ಗುರು?

ಪ್ರೇಮಾಯಣದಲ್ಲಿ ಐ ಲವ್ ಯೂ ಎಂದವರ ಮೂಗು, ಕಿವಿ ಕತ್ತರಿಸುವುದಿಲ್ಲ!

ಶ್ರೀಮತಿ ಸುನಂದ, ಗೌರಿಬಿದನೂರು

ನೀವು ಕೇಳಿದಿರಿ? ಅಂಕಣಕ್ಕೆ ರಾತ್ರಿ, ಹಗಲು, ರಾಹುಕಾಲ, ಯಮಗಂಡಕಾಲ, ಗುಳಿಕ ಕಾಲ ಬಿಟ್ಟು ಯಾವ ಶುಭವೇಳೆಯಲ್ಲಿ ಪ್ರಶ್ನೆ ಕಳುಹಿಸಲಿ?

ದಂಡ ಗುಂಡ ಬ್ರಹ್ಮಾಂಡದವರನ್ನು ಕೇಳಿನೋಡಿ; ಆ ಬುಧರಿಂದಲೇ ಗುರುತರವಾದ ಮುಹೂರ್ತ ದೊರಕೀತು!

ಜೆ.ಆರ್. ಆದಿನಾರಾಯಣಮುನಿ, ಬೆಂಗಳೂರು

ಹೆಣ್ಣಿಲ್ಲದ ಇತಿಹಾಸ, ಸಾಹಿತ್ಯಗಳೇ ಇಲ್ಲವಂತೆ?

ಇತಿಹಾಸವಿಲ್ಲ ನಿಜ, ಆದರೆ ಸಾಹಿತ್ಯವಿದೆ – ಭಗವದ್ಗೀತೆ!

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

ಸರ್ಕಾರ ಎಂಬ ಬಂಡಿಗೆ ಊರುಕೋಣ, ಕಾಡುಕೋಣ ಕಟ್ಟಿದರೆ ಎಲ್ಲಿ ಹೋಗತ್ತೆ?

ಕೋಣ ಇದ್ದಲ್ಲೇ ಬಲಿಯತ್ತೆ, ಊರು, ಕಾಡು ಹಾಳಾಗುತ್ತೆ!

ಕಂಡಕ್ಟರ್ ರಾಜು, ಗುಬ್ಬಿ

ದಿನಭವಿಷ್ಯಕ್ಕೂ, ವಾರಭವಿಷ್ಯಕ್ಕೂ ವ್ಯತ್ಯಾಸವೇನು?

ದಿನಭವಿಷ್ಯ ನಿತ್ಯವೂ ಸುಳ್ಳಾಗುತ್ತದೆ, ವಾರಭವಿಷ್ಯ ವಾರಕ್ಕೊಮ್ಮೆ ಮಾತ್ರ ಸುಳ್ಳಾಗುತ್ತದೆ!

ಪ್ರಜ್ವಲ್ ಪಿ. ಬುರ್ಲಿ, ದಾವಣಗೆರೆ

ಕವಿಗಳು ಕಾವ್ಯನಾಮದಿಂದ ಪ್ರಸಿದ್ಧ; ರಾಜಕಾರಣಿಗಳು...?

Punch ಅಷ್ಟಕ ಮತ್ತು ಸಹಸ್ರನಾಮಗಳಿಂದ!

ಸಿ.ಕೆ. ಗಂಗೇಗೌಡ, ಮಂಡ್ಯ

ಇಂದಿನ ರಾಜಕಾರಣಿಗಳ ಶುದ್ಧೀಕರಣಕ್ಕೆ ಯಾವ ಸುಗಂಧದ್ರವ್ಯ ಬಳಸಬೇಕು?

ಸಮುದ್ರಕ್ಕೆ ನದಿ ಸೇರಿದರೆ ಅದರ ನೀರೂ ಉಪ್ಪೇ; ರಾಜಕಾರಣಿಗಳ ಮೈ ಸೋಕಿದಾಕ್ಷಣ ಸುಗಂಧವೂ ದುರ್ಗಂಧವಾಗುವುದು ಗೌಡರೇ!

## ಬಹುಮಾನಿತ ಪ್ರಶ್ನೆ

ಕೆ.ಹೆಚ್. ರಾಮಕೃಷ್ಣಾರೆಡ್ಡಿ, ಬೆಂಗಳೂರು

ಈಗಿನ ಕಾಲದ ಮಕ್ಕಳು ಸರಿಯಾಗಿ ಊಟ ಮಾಡುವುದಿಲ್ಲ, ದೊಡ್ಡವರಾದಮೇಲೆ ತಂದೆ ತಾಯಿಗೂ ಊಟ ಹಾಕುವುದಿಲ್ಲವಲ್ಲಾ...?

ಮಗೂಗಿಲ್ಲದ್ ಹಸಿವು ಮುದುಕನ್ಗಿರೋದು ತಪ್ಪಲ್ವೇ...! ದರ್ಶಿನೀಲೇ ಬೆಳೆಯೋ ಮಕ್ಳು ದರ್ಶನಕ್ಕಾದ್ರೂ ಸಿಕ್ರೆ ಸಾಕು!

ಜಾಕೋಬ್ ಡಿಸೋಜ, ಕುರುವಳ್ಳಿ

ಸದಾ ಸಾರಾಯಿ ಗುಂಗಿನಲ್ಲಿ ಮುಳುಗಿರುವವನು ಮುಂದೆ ಏನಾಗಬಹುದು ಸಾರ್?

ತೊದಲಿಗರಲ್ಲಿ ಮೊದಲಿಗ!

ಕಾಳೀಹುಂಡಿ ಶಿವಕುಮಾರ್, ಮೈಸೂರು

ಕುಂತ್ರೆ ನಿಂತ್ರೆ ಅವಳ್ದೇ ಧ್ಯಾನ, ಜೀವಕ್ಕಿಲ್ಲ ಸಮಾಧಾನ, ಏನು ಮಾಡಲಿ?

ಮಲಗಿಬಿಡಿ!

ವಿ. ಹಮೀದ್, ವಿಟ್ಲ

ಆಶೀರ್ವಾದ ಮಾಡುವ ಕೈಗಳಿಂದಲೇ ಪ್ರಾಣಕ್ಕೆ ಸಂಚಕಾರ ಬಂದರೆ?



ಹೋಮದ ಬೆಂಕಿ ಮನೆಯನ್ನೂ ಸುಡಬಹುದೆಂಬ ಎಚ್ಚರ ಅವಶ್ಯಕ.

ಹೆಚ್.ಕೆ. ಸುಬ್ಬಲಕ್ಷ್ಮಿ, ಕೋಲಾರ

ಹುಡುಗಿಯರ ಕಾಲೇಜುಗಳ ಬಳಿಯೇ ಹೆಚ್ಚಾಗಿ ಉದ್ಯಾನವನಗಳು ಇರುತ್ತವೆಯಲ್ಲಾ...?

ಕಣ್ಣೋಟಕ್ಕಾಗಿ ಕಾದು ಕಂಗಾಲಾದ ಹುಡುಗರು ರೆಸ್ಟ್ ತೆಗೆದುಕೊಳ್ಳಲೆಂದು!

ವೆಂಕಟೇಶ ಎಂ. ಪೈ, ಹೊನ್ನಾವರ

ಪ್ರೀತಿಗೆ ಕಣ್ಣಿಲ್ಲ ಅಂತಾರೆ, ಆದರೆ ಕಣ್ಣಿಲ್ಲದವರನ್ನು ಯಾರು ಪ್ರೀತಿಸುತ್ತಾರೆ?

ಕೋಲು ಮತ್ತು ಕಪ್ಪು ಕನ್ನಡಕ ಮಾರುವವರು!

■ ರಾಮ್